**ಕರ್ನಾಟಕ ಸರ್ಕಾರ**

ಸಂಖ್ಯೆ:ಡಿಟಿಇ /31/ಇಎಸ್‌ಟಿ(3)/2013

ನಿರ್ದೇಶಕರ ಕಚೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:04-01-2014

**ಅಧಿಕೃತ ಜ್ಞಾಪನ**

ವಿಷಯ: ಕರ್ನಾಟಕ ರಾಜ್ಯ ವೃತ್ತಿ ಶಿಕ್ಷಣ ನಿರ್ದೇಶನಾಲಯದ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೃತ್ತಿ ಶಿಕ್ಷಣ ಅರೆಕಾಲಿಕ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 22 ಶಾಸನ ಬೆಂಗಳೂರು ದಿನಾಂಕ:6-4-2011
2.ಸರ್ಕಾರದ ಆದೇಶ ಸಂ:ಇಡಿ 93 ಟಿವಿಇ 12, ಬೆಂಗಳೂರು, ದಿ:16-01-2013
3.ಸರ್ಕಾರದ ಆದೇಶ ಸಂಖ್ಯೆ: ಇಡಿ/316/ಡಿಟಿಇ/2012, ದಿನಾಂಕ:31-12-2013

****

ಕರ್ನಾಟಕ ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರನ್ನು ರಾಜ್ಯ ಸರ್ಕಾರದ ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸುವುದಕ್ಕಾಗಿ ಉಲ್ಲೇಖ (1)ರಲ್ಲಿ ಸರ್ಕಾರವು ಅಧಿನಿಯಮವನ್ನು ರಚಿಸಿದೆ. ಆ ಪ್ರಕಾರವಾಗಿ ಕರ್ನಾಟಕ ರಾಜ್ಯದಲ್ಲಿನ ಪದವಿಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸ್‌ನಲ್ಲಿ ಅರೆಕಾಲಿಕ ಬೋಧಕ/ಬೋಧಕೇತರಾಗಿ ಕಾರ್ಯನಿರ್ವಹಿಸುತ್ತಿದ್ದ ಕೆಳಕಂಡವರನ್ನು ಉಲ್ಲೇಖ(1)ರ ಅಧಿಸೂಚನೆ ಹಾಗೂ ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯ ಬೋಧಕ **(ಇನ್‌ಸ್ಟ್ರಕ್ಟರ್)** ಹುದ್ದೆಯಲ್ಲಿ ವಿಲೀನಗೊಳಿಸಲು ಪಟ್ಟಿಯನ್ನು ಸಲ್ಲಿಸಲಾಗಿತ್ತು. ಉಲ್ಲೇಖ (3)ರ ಸರ್ಕಾರದ ಆದೇಶದನ್ವಯ ದಿನಾಂಕ:23-11-2013 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮ 61ಎ ಗೆ ತಿದ್ದುಪಡಿ ಮಾಡಿ ವಿದ್ಯಾರ್ಹತೆ ಸಡಿಲಿಸಿ ದಿನಾಂಕ:31-12-2013 ರಂದು ಅಧಿಸೂಚನೆ ಹೊರಡಿಸಲಾಗಿದೆ ಅದರಂತೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಸ್ತಾಪಿತ 19 ಬೋಧಕ **(ಇನ್‌ಸ್ಟ್ರಕ್ಟರ್)** ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಡಿಯಲ್ಲಿರುವ ಸರ್ಕಾರಿ ಸಂಸ್ಥೆಗಳಲ್ಲಿ ಬೋಧಕ **(ಇನ್‌ಸ್ಟ್ರಕ್ಟರ್)** ಹುದ್ದೆಗಳಲ್ಲಿ ವಿಲೀನಗೊಳಿಸಿ ಆದೇಶಿಸಿದೆ.

ಸದರಿ ಅಧಿನಿಯಮ ಮತ್ತು ದಿನಾಂಕ:31-12-2013ರ ಆದೇಶದಲ್ಲಿನ ಷರತ್ತುಗಳಿಗೊಳಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡ ಅರೆಕಾಲಿಕ ಬೋಧಕ/ಬೋಧಕೇತರ ಶಿಕ್ಷಕರುಗಳನ್ನು ವಿಲೀನಗೊಳಿಸಿ ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ರಾಜ್ಯ ವೇತನ ಶ್ರೇಣಿ ರೂ.17650-32000ರಲ್ಲಿ **ಖಾಲಿ ಇರುವ ಬೋಧಕರ ಹುದ್ದೆಗೆ** ಅವರ ಹೆಸರಿನ ಮುಂದೆ ನಮೂದಿಸಿರುವ ಸಂಸ್ಥೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

| ಕ್ರ ಸಂ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ಜನ್ಮ ದಿನಾಂಕ | ಅರೆಕಾಲಿಕ ಹುದ್ದೆಗೆ ಸೇರಿದ ದಿನಾಂಕ | ಪ್ರವರ್ಗ | ಸ್ಥಳ ನಿಯುಕ್ತಿ ಗೊಳಿಸಿದ ಸಂಸ್ಥೆ |
|---|---|---|---|---|---|
| (1) | (2) | (3) | (4) | (5) | (6) |
| | | | **ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗ** | | |
| 1 | ಸಯ್ಯದ್ ಮುಕ್ತಾರ್, ಬಿನ್ ಸಯ್ಯದ್ ಪೀರ್, ನಂ.140/2, ಸಿಟಿಜನ್ ಸ್ಕೂಲ್ ಪಕ್ಕ ಉದಯಗಿರಿ, 2ನೇ ಹಂತ ಮೈಸೂರು-570019 | 15/07/1962 | 01/01/1986 | 2 ಬಿ | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್ ಪೇಟೆ |
| 2 | ಮುರಳೀಧರ ಪಿ.ಎ, ಬಿನ್ ಆದಿಶೇಷ ಶಾಸ್ತ್ರಿ ಪಿ.ವಿ ಮುತ್ತೂರು ಬೀದಿ ಶಿಡ್ಲಘಟ್ಟ ಟೌನ್ -562105 ಚಿಕ್ಕಬಳ್ಳಾಪುರ ಜಿಲ್ಲೆ | 01/3/1961 | 30/07/1988 | ಸಾ.ಅ | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |
| 3 | ಭಾವುರಾವ್ ಬಿನ್ ಭಗವಂತರಾವ್ ಪಾಟೀಲ್ ನಾಯಕನಗರ ಆಳಂದ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ-585302 | 01/06/1969 | 16/07/1991 | 3 ಬಿ | ಸಹಾಯಕ ಉಪನ್ಯಾಸಕರು (ಎಲೆಕ್ಟ್ರಿಕಲ್) ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಗುಲ್ಬರ್ಗಾ |
| | | | **ಎಲೆಕ್ಟಾನಿಕ್ಸ್ ಮತ್ತು ಕಮ್ಯೂನಿಕೇಷನ್ ವಿಭಾಗ** | | |
| 1 | ಕೆ.ಬಾಲಚಂದ್ರ ಹೆಬ್ಬಾರ್, ಬಿನ್ ದಿ.ರಾಮಣ್ಣ ಹೆಬ್ಬಾರ್, "ಶ್ರೀರಾಮಧಾಮ" ನಿಲಯ, ನೆಹರು ನಗರ, ಹುತ್ತೂರ್ಕೆ, ಹೆಬ್ರಿ ಅಂಚೆ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ | 15/05/1968 | 15/09/1992 | 2 ಬಿ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ |
| 2 | ಗೋವಿಂದರಾಜು, ಎಂ.ಎನ್ ಬಿನ್ ಲೇಟ್ ನಂಜೇಗೌಡ ಎಂ.ವಿ "ಹೊಂಗಿರಣ" ನಂ.58/2, ವಿಶ್ವಮಾನವ ರಸ್ತೆ ಕುವೆಂಪು ಬಡಾವಣೆ, ಕೆ.ಆರ್ ನಗರ-571602 ಮೈಸೂರು ಜಿಲ್ಲೆ | 21/07/1971 | 07/06/1997 | 3 ಎ | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸಿಪುರ |
| | | | **ಸಿವಿಲ್ ಇಂಜಿನಿಯರಿಂಗ್ ವಿಭಾಗ** | | |
| 1 | ಬಸವರಾಜ್ ಅಡೂರ್ ಬಿನ್ ವೀರಣ್ಣ ವಿಕಾಸನಗರ ಬೊಮ್ಮನ ಹಾಳಜಿನ್ ಹಿಂಬಾಗ ಕೊಪ್ಪಳ ತಾಲ್ಲೂಕು ಮತ್ತು ಟೌನ್ ಕೊಪ್ಪಳ ಜಿಲ್ಲೆ-583231 | 26/07/1964 | 01/02/1994 | ಸಾ.ಅ | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ |

| | | | | | |
|---|---|---|---|---|---|
| 2 | ಸಂಜಯ್ ಎಸ್<br>ಬಿನ್ ಸುಂದರರಾಜ್,<br>c/o ಹ್ಯಾರಿ ಚೌಪ್‌ಮನ್ ಡಿ ನಂ.7/803, 1ನೇ ಕ್ರಿಶ್ಚಿಯನ್‌ಬೀದಿ,<br>ಕೊಳ್ಳೆಗಾಲ-571440<br>ಚಾಮರಾಜನಗರ ಜಿಲ್ಲೆ | 14/11/1967 | 03/12/1994 | 3 ಬಿ | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ |
| 3 | ಲಿಂಗರಾಜು ಎಸ್.ಪಿ<br>ಬಿನ್ ಪಟ್ಟಸ್ವಾಮಿ ಗೌಡ, ಸುರಪುರ ಗ್ರಾಮ ಕುಳಗಹಳ್ಳಿ ಅಂಚೆ, ಕೊಳ್ಳೆಗಾಲ ತಾಲ್ಲೂಕು,-571440<br>ಚಾಮರಾಜನಗರ ಜಿಲ್ಲೆ | 23/07/1963 | 24/06/1995 | 3 ಎ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ |
| ಪ್ರಿಂಟಿಂಗ್ ಟೆಕ್ನಾಲಜಿ (ಲಿಥೋ) ವಿಭಾಗ | | | | | |
| 1 | ಕೆ. ಶ್ರೀನಿವಾಸಮೂರ್ತಿ,<br>ಬಿನ್ ಕೆಂಚಯ್ಯ ಮನೆ ನಂ.2472/2, 5ನೇ ಅಡ್ಡರಸ್ತೆ, ಗಾಂಧಿನಗರ ಮಂಡ್ಯ-571401 | 23/05/1964 | 21/08/1989 | ಪ.ಜಾ | ಸರ್ಕಾರಿ ತಾಂತ್ರಿಕ ಮುದ್ರಣ ಸಂಸ್ಥೆ, ಬೆಂಗಳೂರು |
| ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗ | | | | | |
| 1 | ಶ್ರೀನಾಥ ಜಿ,<br>s/o ಲೇ. ಬಿ.ಎಸ್ ಗೋಪಾಲಕೃಷ್ಣ "ಶ್ರೀನಿಕೇತನ", 15ನೇ ಕ್ರಾಸ್, ಎಸ್.ಐ.ಟಿ ಬಡಾವಣೆ,<br>ತುಮಕೂರು-572103 | 9/5/1971 | 17/07/1989 | ಸಾ. ಅ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ |
| 2 | ಶಿವಪ್ರಸಾದ್ ಶೆಟ್ಟಿ ಎ,<br>s/o ಮಹಾಬಲ ಶೆಟ್ಟಿ ಕೆ "ಶ್ರೀನಿಧಿ" ಪರಿಕ ಕೆಳಮನೆ, ಆತ್ರಾಡಿ ಉಡುಪಿ-576107 | 24/11/1971 | 20/08/1993 | 3 ಬಿ | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ |
| 3 | ಹರೀಶ್ ಕುಮಾರ್ ಬಿ.ಎನ್,<br>s/o ನಂದಕುಮಾರ್ ಬಿ.ಎನ್ ನಂ.2/85 ಬಿ, "ಹರಿಕೃಪ" ಹರಿಕಂಡಿಗೆ ಅಂಚೆ, ಬೈರಂಪಳ್ಳಿ,<br>ಉಡುಪಿ-576124 | 24/08/1972 | 24/06/1994 | ಸಾ.ಅ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಾರ್ಕಳ |
| 4 | ದೀಪ ವಿ.ಜೆ<br>D/o ಲೇಟ್ ವಿ.ಡಿ ಜಯಪ್ರಕಾಶ್ ಬಸವೇಶ್ವರ ರಸ್ತೆ ಬಿನ್ನಿ ಬ್ಲಾಕ್, ವೇಮಗಲ್ ಅಂಚೆ, ಕೋಲಾರ ತಾಲ್ಲೂಕು-563102 | 06/02/1976 | 08/02/1995 | 3 ಬಿ | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ |

| | | | | | |
|---|---|---|---|---|---|
| 5 | ಕೇಶವಪ್ರಸಾದ್, ಟಿ.ಎಸ್ s/o ಸಂಪತ್ ಅಯ್ಯಂಗಾರ್ ಟಿ.ಎಸ್ ತಂಗಲಿ ಅಂಚೆ ಕಡೂರು ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ-577548 | 11/08/1968 | 24/06/1995 | ಸಾ.ಅ | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು |
| 6 | ಸುರೇಶ್ ಬಿ.ವಿ, s/o ವೆಂಕಟರಾಮಯ್ಯ 16ನೇ ಕ್ರಾಸ್, ಎಸ್.ಐ.ಟಿ ಬಡಾವಣೆ, ತುಮಕೂರು-572103 | 19/02/1974 | 24/06/1995 | 3 ಎ | ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ, ಬೆಂಗಳೂರು |
| 7 | ಶಶಿಕಲಾ ಎನ್.ಎಸ್, w/o ಸೋಮೇಶ ಕೆ, ಎಲ್.ಐ.ಜಿ-44, ಕೆಹೆಚ್‌ಬಿ ಕಾಲೋನಿ ದೇವಕಿ ಕಲ್ಯಾಣ ಮಂಟಪದ ಹಿಂಬಾಗ ಹೊಸಕೋಟೆ-562114 ಬೆಂಗಳೂರು ಗ್ರಾಮಾಂತರ ಜಿಲ್ಲೆ | 13/05/1975 | 01/07/1995 | ಪ.ಜಾ | ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ |
| 8 | ರಾಜನ್ ಎಸ್ s/o ಸುಂದರಮೂರ್ತಿ ನಂ.23, ರಾಮರ ದೇವಸ್ಥಾನ ಎದುರು, ಬಿ.ಎಂ ರಸ್ತೆ ಆಂಡ್ರಸನ್ ಪೇಟೆ, ಕೆ.ಜಿ.ಎಫ್-563113 ಕೋಲಾರ ಜಿಲ್ಲೆ | 08/07/1973 | 05/07/1995 | ಪ.ಜಾ | ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ |
| 9 | ಸುದರ್ಶನ, ಎಂ.ಕೆ ಬಿನ್ ಕೃಷ್ಣೆಗೌಡ ಎಂ.ಎಸ್ ನಂ.2/311, ಮಾರಮ್ಮನ ದೇವಸ್ಥಾನ ಎದರು ವಿನಾಯಕ ಬಡಾವಣೆ, ಕೆ.ಆರ್ ನಗರ ತಾಲ್ಲೂಕು ಟೌನ್ ಮೈಸೂರು ಜಿಲ್ಲೆ-571602 | 01/04/1971 | 07/06/1997 | 3 ಎ | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸಿಪುರ |
| 10 | ಭೀವಾಜಿ, ಬೀವಾಜಿ ರಾಮಚಂದ್ರ ಪಾಂಡ್ರೆ, ರಾಮಚಂದ್ರ ಪಾಂಡ್ರೆ, ಕಿನ್ನಿ ಸುಲ್ತಾನ ಅಂಚೆ ಆಳಂದ ತಾಲ್ಲೂಕು-585306 ಗುಲ್ಬರ್ಗಾ ಜಿಲ್ಲೆ | 10/10/1973 | 15/07/1999 | 3 ಬಿ | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ |

ಇತರೆ ಷರತ್ತುಗಳು:

1. ಇವರ ನೇಮಕಾತಿಯು ಜಾರಿಯಲ್ಲಿರುವ ಸೇವಾಷರತ್ತುಗಳ ಕುರಿತ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011 ಮತ್ತು ಸರ್ಕಾರದ ಆದೇಶ ಸಂ. ಇಡಿ 93 ಟಿವಿಇ 12, ಬೆಂಗಳೂರು, ದಿನಾಂಕ: 16–01–2013 ರ ಅಧೀನಕ್ಕೆ ಒಳಪಟ್ಟಿರುತ್ತದೆ.

2. ಇವರು ಈ ಅಧಿಕೃತ ಜ್ಞಾಪನದನ್ವಯ ಬೋಧಕರ ಹುದ್ದೆಯಲ್ಲಿ ಕಾರ್ಯವರದಿ ಮಾಡಿದ ದಿನಾಂಕದಿಂದ 2 ವರ್ಷಗಳ ಅವಧಿಗೆ ಕರ್ನಾಟಕ ಸಿವಿಲ್ ಸೇವೆಗಳ [ಪ್ರೊಬೇಷನ್] ನಿಯಮಗಳು 1977ರ ನಿಯಮ 3ರ ಅನ್ವಯ ಖಾಯಂಪೂರ್ವ ಅವಧಿಯನ್ನು ತೃಪ್ತಿಕರವಾಗಿ ಪೂರೈಸಬೇಕಾಗಿರುತ್ತದೆ.

3. ಇವರು ಪರಿವೀಕ್ಷಣಾ ಅವಧಿಯಲ್ಲಿ ಕರ್ನಾಟಕ ಸರ್ಕಾರಿ ಸೇವಾ [ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು] 1974ರ ನಿಯಮಾವಳಿಗಳನ್ವಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.

4. ಉಲ್ಲೇಖ (1)ರ ಅಧಿನಿಯಮದ ಪ್ರಕರಣ 5(2) ರ ಅನ್ವಯ, ವಿಲೀನಗೊಂಡ ಸಿಬ್ಬಂದಿಗಳ ಪ್ರಾರಂಭಿಕ ಮೂಲವೇತನವನ್ನು ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನಶ್ರೇಣಿಯ ಕನಿಷ್ಠಕ್ಕೆ ನಿಗದಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

5. ವಿಲೀನಗೊಂಡ ಈ ನೌಕರನು ದಿನಾಂಕ 1–4–2006ರ ನಂತರದಲ್ಲಿ ಜಾರಿಯಲ್ಲಿರುವ ಹೊಸ ಅಂಶದಾಯಿಕ ಪಿಂಚಣಿ ಯೋಜನೆಗೆ [NPS] ಒಳಪಟ್ಟಿರುತ್ತಾರೆ.

6. ಇವರ ಸೇವಾ ಜೇಷ್ಠತೆಯನ್ನು ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011 ರ ಪ್ರಕರಣ 5(2) ರನ್ವಯ ಅರೆಕಾಲಿಕ ಬೋಧಕ ಇಂಟರ್ ಸೇವಾ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ ಪರಿಷ್ಕರಿಸುವ/ ಬದಲಾವಣೆಗೆ ಒಳಪಟ್ಟಿರುತ್ತದೆ ಮತ್ತು ಇವರ ಜೇಷ್ಠತೆಯು ಇಲಾಖೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಆಯಾ ವಿಭಾಗದ ಬೋಧಕರ ವೃಂದದಲ್ಲಿ ಕಿರಿಯರಾಗಿ ಜೇಷ್ಠತೆಯನ್ನು ನಿಗದಿಪಡಿಸಲಾಗುವುದು.

7. ಇವರುಗಳ ನೇಮಕಾತಿಯು ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸ್‌ಗಳ ನೌಕರರುಗಳ ಸೇವಾ ವಿಲೀನತೆ ಬಗ್ಗೆ ಉದ್ಭವಿಸಬಹುದಾದ ನ್ಯಾಯಾಲಯದ ತಕರಾರುಗಳಲ್ಲಿ ನ್ಯಾಯಾಲಯಗಳು ನೀಡಲಿರುವ ತೀರ್ಪಿಗೆ ಒಳಪಟ್ಟಿರುತ್ತದೆ.

8. ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರು ಅಭ್ಯರ್ಥಿಯ ವಿದ್ಯಾರ್ಹತೆ, ಜನ್ಮ ದಿನಾಂಕ, ಜಾತಿ/ಮೀಸಲಾತಿ ಇವುಗಳ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಳ್ಳತಕ್ಕದ್ದು. ಪರಿಶೀಲಿಸಿದ ಬಗ್ಗೆ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ಅವರ ಸೇವಾಪುಸ್ತಕದಲ್ಲಿ ಲಗತ್ತಿಸತಕ್ಕದ್ದು.

9. ಶ್ರೀಯುತರು ತಮಗೆ ಸ್ಥಳನಿಯುಕ್ತಿಗೊಳಿಸಿದ ಸಂಸ್ಥೆಗಳಲ್ಲಿ ನೇಮಕಾತಿ ಅದೇಶ ಸ್ವೀಕರಿಸಿದ 15 ದಿನಗಳೊಳಗಾಗಿ ಕಾರ್ಯವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದರಿಯವರ ಈ ಆದೇಶವು ತಂತಾನೆ ರದ್ದುಗೊಳ್ಳುತ್ತದೆ.

(ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

M. Devaluk

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ.

DESPATCHED
No. 5605
Date 4/1/14
By

*ಇವರಿಗೆ,*

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ರವರಿಗೆ ರವಾನಿಸುತ್ತಾ ಈ ಅಧಿಕೃತ ಜ್ಞಾಪನವನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 25 ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

**ಪ್ರತಿಗಳು:**

1. ಮಹಾಲೇಖಪಾಲರು–01 ಮತ್ತು 2, ಕರ್ನಾಟಕ ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ವೃತ್ತಿ ಶಿಕ್ಷಣ ನಿರ್ದೇಶನಾಲಯ, ಪದವಿ ಪೂರ್ವ ಶಿಕ್ಷಣ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–ಇವರಿಗೆ ಮುಂದಿನ ಕ್ರಮಕ್ಕಾಗಿ
7. ಸಂಬಂಧಪಟ್ಟ ಜಿಲ್ಲಾ ಮತ್ತು ತಾಲ್ಲೂಕು ಖಜಾನಾಧಿಕಾರಿಗಳಿಗೆ.
8. ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರಿಗೆ.
9. ಅರೆಕಾಲಿಕ ಬೋಧಕ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿರುವ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರಿಗೆ
10. ಸಂಬಂಧಪಟ್ಟ ಅರೆಕಾಲಿಕ ಬೋಧಕ/ಬೋಧಕೇತರ ಸಿಂಬಂಧಿಯವರಿಗೆ (ನೊಂದಾಯಿತ ಅಂಚೆ ಮತ್ತು ಸ್ವೀಕೃತಿ ಬಾಕಿ ಮೂಲಕ).
11. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನಸೌಧ, ಬೆಂಗಳೂರು
12. ಕಛೇರಿ ಪ್ರತಿ.